# ಕಾಗೆ ಕಾಗೆ ಕವ್ವ...!

■ ಸುಮಾ ರಮೇಶ್, ಹಾಸನ
ಕಲೆ: ಸಂತೋಷ್ ಸಸಿಹಿತ್ಲು

ಮಗನ ಬಲವಂತಕ್ಕೆ ಮಣಿದು ಬರ್ಲಿನ್‌ನಲ್ಲಿದ್ದ ಅವನ ಮನೆಗೆ ಗಂಟುಮೂಟೆ ಕಟ್ಟಿಕೊಂಡು ಬಂದಿಳಿದಿದ್ದೆ. ಸ್ವದೇಶದಲ್ಲಿ ನಾನು ಅಂಟು ಹಾಕಿಕೊಂಡಿದ್ದ ಹಲವು ಬಗೆಯ ಹವ್ಯಾಸಗಳು, ತರಲೆ ತಾಪತ್ರಯಗಳ ನಡುವೆ ಹೀಗೆ ದಿಢೀರನೆ ವಿದೇಶಕ್ಕೆ ಬಂದು ಸಿಕ್ಕಿ ಹಾಕಿಕೊಳ್ಳುವುದು ನನಗೆ ಸರ್ವಥಾ ಸಮ್ಮತವಿರಲಿಲ್ಲ. ಆದರೆ ಬಂದ ಕೆಲವೇ ದಿನಗಳಲ್ಲಿ ನನ್ನ ಪೂರ್ವಗ್ರಹಗಳೆಲ್ಲಾ ಬದಿಗೆ ಸರಿದು ಹೊಸ ಪರಿಸರ ಬಹಳ ಪ್ರಿಯವಾಗತೊಡಗಿತು. ಭಾರತದ ನುಗ್ಗೆಸೊಪ್ಪಿನಿಂದ ಹಿಡಿದು ಮುದ್ದೆ ಬಸ್ಸಾರಿನವರೆಗೆ ಎಲ್ಲವೂ ಲಭ್ಯವಾದಾಗ ಈ ಭಾರೀ ಭೌಗೋಳಿಕ ಅಂತರ ಅಂತಹ ವ್ಯತ್ಯಾಸವನ್ನೇನೂ ತೋರಲಿಲ್ಲ. ತೂಕದ ಲೆಕ್ಕದಲ್ಲಿ ಹೊತ್ತು ತಂದಿದ್ದ ಕಿಟ್ ಬ್ಯಾಗ್ ಕೊಡವಿ, ಜೆಟ್ ಲ್ಯಾಗ್ ಕಿರಿಕಿರಿಯನ್ನೆಲ್ಲಾ ದಾಟಿ ಹೊಸ ದೇಶಕ್ಕೆ ಹಳಬಳಾಗುತ್ತಾ ಹೋದಂತೆ ನನ್ನ ಹವ್ಯಾಸ, ಆಚರಣೆ, ಅಭ್ಯಾಸಗಳೆಲ್ಲಾ ಪುಟಿದೆದ್ದವು.

ಸ್ವದೇಶದಿಂದ ಹೊರಡುವ ಮುನ್ನ ಯಾವುದೋ ಕೌಟುಂಬಿಕ ಸಮಸ್ಯೆ ಎದುರಾದಾಗ ಜ್ಯೋತಿಷಿಯೊಬ್ಬರು ಮೊಸರನ್ನಕ್ಕೆ ಕಪ್ಪಗಿನ ಎಳ್ಳು ಬೆರೆಸಿ ಕಾಗೆಗಳಿಗೆ ಇಡಬೇಕೆಂದು ಅಮ್ಮನಿಗೆ ಸಲಹೆ ನೀಡಿದ್ದರೆಂದು ಆ ಕೆಲಸವನ್ನು ಅಮ್ಮ ನನಗೆ ವಹಿಸಿದ್ದರು. ಅವರ ನಂಬಿಕೆಯನ್ನು ಗೌರವಿಸುವ ಮನಸ್ಸಿದ್ದರೂ ಗುಬ್ಬಿಗಳೊಂದಿಗೆ ಕಾಗೆಗಳೂ ಮಾಯವಾಗಿರುವ ಸದ್ಯದ ಪರಿಸ್ಥಿತಿಯಲ್ಲಿ ಅವುಗಳನ್ನು ಹುಡುಕಿ ತಿಲಾನ್ನಪ್ರಾಶನ ಮಾಡಿಸಿ ಬ್ಯಾಕ್ ಲಾಗ್ಸ್ ಮೂಟೆಯನ್ನು ಕಳಚಿಕೊಳ್ಳುವುದು ಅಸಾಧ್ಯದ ಮಾತಾಗಿತ್ತು. ಇತ್ತೀಚೆಗೆ ಯುವಜನತೆಯ ಬಾಡಿ, ಜಂಕ್ ಫುಡ್‌ಗೆ ಲಿಂಕ್ ಆದಂತೆ ಪಶು ಪಕ್ಷಿಗಳ ಆಹಾರ ಪದ್ಧತಿಯೂ ಬದಲಾಗಿ ಪಾರಂಪರಿಕ ಆಹಾರವನ್ನು ನಾಯಿ, ಬೆಕ್ಕುಗಳು ಮೂಸಿಯೂ ನೋಡದ ಸ್ಥಿತಿ ಸೃಷ್ಟಿಯಾಗಿದೆ. ಅಂತೆಯೇ ಮೊಸರನ್ನ, ಪಾಯಸ ಮಾಡಿ ಮಾಳಿಗೆ ಮೇಲಿರಿಸಿ ವಾಯಸ (ಕಾಗೆ)ಗಳನ್ನು ಅರಸುತ್ತಾ 'ಕಾಗೆ ಕಾಗೆ ಕವ್ವ... ನೀನ್ ಯಾವಾಗ ಬರ್ತೀಯವ್ವಾ...' ಎಂದು ಕಾದು ಕುಳಿತರೆ 'ಇದೋ ಬಂದೇನವ್ವಾ... ಅದೇನು ಚೆಲ್ತೀಯವ್ವಾ...' ಎನ್ನುತ್ತಾ ಪಾರಿವಾಳಗಳು ಬಂದು ಪ್ರಾಕ್ಸಿ ಹಾಕುವ ಅವಕಾಶಗಳೇ ಹೆಚ್ಚು. ಹಾಗಾಗಿ ಎಳ್ಳಿರಿಸುವ ಅಮ್ಮನ ಪ್ರಸ್ತಾವನೆಗೆ ಎಳ್ಳು ನೀರು ಬಿಟ್ಟು ಇಲ್ಲಿಗೆ ಹಾರಿ ಬಂದಿದ್ದೆ.

ನಿನ್ನೆ ರಾತ್ರಿ ವಿಡಿಯೊ ಕರೆ ಮಾಡಿ ಕುಶಲ ವಿಚಾರಿಸಿದ ಅಮ್ಮ ಅದೇ ವಿಷಯವನ್ನು ಮತ್ತೊಮ್ಮೆ ಪ್ರಸ್ತಾಪಿಸಿ ಒತ್ತಡ ತಂದಾಗ ಅವರ ಸಮಾಧಾನಕ್ಕೆ ಗೋಣಾಡಿಸಿ ಒಪ್ಪಿಗೆ ಸೂಚಿಸಿದೆ. ಭಾರತದಲ್ಲೇ ಕಾಗೆಗಳಿಗೆ ಬರ ಬಂದಿರುವಾಗ ವಿದೇಶದಲ್ಲಿ ಅವನ್ನು ಹುಡುಕುವುದು ಸಾಧ್ಯವೇ ಎಂಬ ಚಿಂತೆಯಲ್ಲಿ ಸೊಸೆಯೊಂದಿಗೆ ಗುಟ್ಟಾಗಿ ನನ್ನ ಸಮಸ್ಯೆಯನ್ನು ಅರುಹಿದಾಗ ನಸುನಕ್ಕ ಅವಳು ಅದೇನು ದೊಡ್ಡ ಸಮಸ್ಯೆಯಲ್ಲವೆಂದು ತಿಳಿಸಿ ಎದುರುಗಡೆ ಇರುವ ಪಾರ್ಕಿಗೆ ಆಗಾಗ

